ಈ ದಿನ ದಿನಾಂಕಃ 05.03.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿವೆ.

ದಿಃ 28.01.1982ರ ಕ್ರಯಪತ್ರದ ಮೂಲ ದಾಖಲೆ ಕಳೆದುಹೋಗಿದ್ದು, ಅದರ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನನ್ನ ಪರವಾಗಿ ದ್ವಿತೀಯಕ ಸಾಕ್ಷವೆಂದು ಪರಿಗಣಿಸಿ ನಿಶಾನೆಗೊಳಪಡಿಸುವಂತೆ ಕೋರುತ್ತೇನೆ. ಅನುಮತಿಸಲಾಯಿತು.

ನನ್ನ ದಾವೆಗೆ ಪೂರಕವಾಗಿ ಈ ಕೆಳಗಿನ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗೆ ಒಳಪಡಿಸಲು ವಿನಂತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೆ ಒಳಪಡಿಸಲಾಯಿತು.

| ಕ್ರ.ಸಂ | ದಾಖಲಾತಿಯ ವಿವರ | ನಿಶಾನೆ ಸಂಖ್ಯೆ |
|---|---|---|
| 1 | ಅಸಲು ದಾವೆ ಸಂ.80/2012ರಲ್ಲಿನ ವಾದ ಪತ್ರದ ದೃನ | ನಿಪಿ 1 |
| 2 | ಸದರಿ ದಾವೆಯಲ್ಲಿನ 6ನೇ ಪ್ರತಿವಾದಿಯ ಪ್ರತಿವಾದ ಪತ್ರದ ದೃನ | ನಿಪಿ 2 |
| 3 | ಸದರಿ ದಾವೆಯಲ್ಲಿನ ತೀರ್ಪು ಮತ್ತು ಡಿಕ್ರಿಯ ದೃನ | ನಿಪಿ 3 |
| 4 | ಸರ್ವೆ ನಂ. 17/2ರ 1985 ರಿಂದ 1990 ನೇ ಸಾಲಿನ ಪಹಣಿಯ ದೃನ | ನಿಪಿ 4 |
| 5 | ಎಂ ಆರ್. 1/1981-82ರ ದೃನ | ನಿಪಿ 5 |
| 6 | ದಿಃ 28.01.1982 ರ ಕ್ರಯಪತ್ರದ ದೃನ | ನಿಪಿ 6 |
| 7 | ಅಸಲು ದಾವೆ ಸಂ. 296/2022 ರಲ್ಲಿನ ಪ್ರಾಸಾ.1 ರವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನ ದೃನ | ನಿಪಿ 7 |
| 8 | ಅಸಲು ದಾವೆ ಸಂ. 80/2012 ರಲ್ಲಿನ 1ನೇ ಪ್ರತಿವಾದಿಯ ಪ್ರತಿವಾದ ಪತ್ರದ ದೃನ | ನಿಪಿ 8 |
| 9 | ಸರ್ವೆ ನಂ. 61/1ರ ಪಕ್ಕಾ ಬುಕ್ ನ ದೃನ | ನಿಪಿ 9 |

ಮುಂದುವರೆದ ಮುಖ್ಯವಿಚಾರಣೆಗೆ ವಕೀಲರು ಕಾಲವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.